**ಸಾಕ್ಷಿಯನ್ನು ದಿನಾಂಕ: 10.03.2026 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿಗಳ ಪರ ಶ್ರೀ VGB ವಕೀಲರಿಂದಃ**

ದಾವಾ ಆಸ್ತಿಯನ್ನು ನಮ್ಮ ತಂದೆಯು ಖರೀದಿ ಮಾಡಿಕೊಂಡ ಸಮಯದಲ್ಲಿ ಹಳೆಯ ಹಂಚಿನ ಮನೆ ಮತ್ತು ಹಿತ್ತಲು ಆಗಿತ್ತು, ನಂತರ ಸಂಪೂರ್ಣ ಜಾಗದಲ್ಲಿ ಅಂತಸ್ತಿನ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಾಗವನ್ನು ನಾನು ಖರೀದಿ ಮಾಡಿಕೊಂಡಿರುತ್ತೇನೆ ಎನ್ನಲಾದ ಸಮಯದಲ್ಲಿಯೂ ಅಂತಸ್ತಿನ ಮನೆ ಇತ್ತು ಎಂದರೆ ಸಾಕ್ಷಿಯು ಆ ಸಮಯದಲ್ಲಿಯೂ ಹಳೆ ಹಂಚಿನ ಮನೆಯೇ ಇತ್ತು ಎಂದು ಹೇಳುತ್ತಾರೆ. ಸದರಿ ಜಾಗದಲ್ಲಿ ಯಾವ ವರ್ಷದಲ್ಲಿ ಅಂತಸ್ತಿನ ಮನೆ ಕಟ್ಟಿರುತ್ತೇವೆ ಎಂದು ನನಗೆ ಈಗ ನೆನಪಿಲ್ಲ. ಸದ್ಯ ಇರುವ ಅಂತಸ್ತಿನ ಮನೆಯಲ್ಲಿ ಯಾರಿಗೂ ಬಾಡಿಗೆ ಕೊಟ್ಟಿರುವುದಿಲ್ಲ. ಸದರಿ ಜಾಗದಲ್ಲಿ ಅಂತಸ್ತಿನ ಮನೆಯನ್ನು ನಾನೇ ಕಟ್ಟಿರುತ್ತೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಪಂಚಾಯತಿಯಿಂದ ಪಡೆದುಕೊಂಡ ಅನುಮತಿ ಆದೇಶವನ್ನು ಹಾಜರುಪಡಿಸಿರುವುದಿಲ್ಲ. ಸದರಿ ಮನೆಯನ್ನು ಕಟ್ಟುವ ಸಮಯದಲ್ಲಿ ಪಂಚಾಯತಿ ಅನುಮತಿಯನ್ನು ಪಡೆದಿರುವುದಿಲ್ಲ. ದಾವಾ ಆಸ್ತಿಯಲ್ಲಿರುವ ಅಂತಸ್ತಿನ ಮನೆಯನ್ನು ಕಟ್ಟಲು ಸುಮಾರು ಒಂದೂವರೆ ಲಕ್ಷ ಖರ್ಚು ಮಾತ್ರ ಬಂದಿರುತ್ತದೆ. ಸದರಿ ಜಾಗದಲ್ಲಿ ಇದ್ದ ಹಳೆಯ ಮನೆಯನ್ನು ಕೆಡವಿ ನಂತರ ಹೊಸ ಅಂತಸ್ತಿನ ಮನೆಯನ್ನು ನಿರ್ಮಾಣ ಮಾಡಿರುತ್ತೇನೆ. ನಾನೇ ಕಟ್ಟಿರುತ್ತೇನೆ ಎಂದು ಹೇಳಲಾದ ಮನೆಯನ್ನು ನಿರ್ಮಾಣ ಮಾಡುವ

ಸಮಯದಲ್ಲಿ ಸೀಮೆಂಟ್ ತೆಗೆದುಕೊಂಡ ಬಗ್ಗೆ ಅಥವಾ ಮನೆ ನಿರ್ಮಾಣಕ್ಕೆ ಬೇಕಾದ ವಸ್ತುಗಳನ್ನು ಖರೀದಿ ಮಾಡಿದ ಬಗ್ಗೆ ಯಾವುದಾದರೂ ರಶೀದಿಗಳು ಈಗ ಇರುವುದಿಲ್ಲ. ಸದರಿ ಮನೆಯನ್ನು ನಾಗಪ್ಪ ವಡ್ಡರ ಇವರು ನಿರ್ಮಾಣ ಮಾಡಿರುತ್ತಾರೆ. ಸದರಿ ನಾಗಪ್ಪ ಇವರಿಗೆ ಆ ಸಮಯದಲ್ಲಿ 60 ವರ್ಷದವರಿದ್ದರು. ಸದರಿ ಮನೆಯನ್ನು ನಿರ್ಮಾಣ ಮಾಡಲು ಸದರಿ ನಾಗಪ್ಪ ವಡ್ಡರ ಇವರಿಗೆ ಸಂಬಳ ಕೊಟ್ಟ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ ಹಾಗೂ ಎಷ್ಟು ಹಣವನ್ನು ಕೊಟ್ಟಿರುತ್ತೇವೆ ಎಂದು ನನಗೆ ನೆನಪಿಲ್ಲ. ನಾನೇ ಅಂತಸ್ತಿನ ಮನೆಯನ್ನು ಕಟ್ಟಿರುತ್ತೇನೆ ಎಂದು ಹೇಳಲಾದ ಮನೆಯು ಪೂರ್ವ ಪಶ್ಚಿಮ 24 ಪೂಟ್ ಹಾಗೂ ದಕ್ಷಿಣೋತ್ತರ 93 ಪೂಟ್ ಇರುತ್ತದೆ. ಸದರಿ ಮನೆಯು ಎರಡು ಅಂತಸ್ತಿನ ಮನೆ ಇರುತ್ತದೆ ಎಂದರೆ ನಿಜ. ಸದರಿ ಮನೆಯನ್ನು ಕೇವಲ ಒಂದೂವರೆ ಲಕ್ಷದಲ್ಲಿ ನಿರ್ಮಾಣ ಮಾಡಲು ಸಾದ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮನೆಯನ್ನು ನಿರ್ಮಾಣ ಮಾಡುವ ಸಮಯದಲ್ಲಿ ನಾನು ಯಾವುದೇ ಸಾಲವನ್ನು ಮಾಡಿರುವುದಿಲ್ಲ.

ದಾವಾ ಆಸ್ತಿಯನ್ನು ನಮ್ಮ ತಂದೆಯವರು 1986 ರಲ್ಲಿ ಖರೀದಿ ಮಾಡಿದ ಸುಮಾರು 4-5 ವರ್ಷಗಳ ನಂತರ ಸದರಿ ಜಾಗದಲ್ಲಿ ನಮ್ಮ ತಂದೆಯೇ ಲಕ್ಷಾಂತರ ರೂಪಾಯಿಗಳ ಖರ್ಚು ಮಾಡಿ ಎರಡು ಅಂತಸ್ತಿನ ಮನೆಯನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನಂ. 953 ನ್ನು ನಾನು ಖರೀದಿ ಮಾಡುವ ಸಮಯದಲ್ಲಿ ನಮ್ಮ ದೊಡ್ಡಪ್ಪಂದಿರು ಹಾಗೂ ಚಿಕ್ಕಪ್ಪಂದಿರು ಜೀವಂತ ಇದ್ದರು ಎಂದರೆ ನಿಜ. ಸದರಿ ಮನೆಯನ್ನು ಖರೀದಿ ಮಾಡುವ ವಿಷಯವನ್ನು

ಸದರಿಯವರಿಗೆ ತಿಳಿಸಿರುವುದಿಲ್ಲ ಹಾಗೂ ಅವರ ಸಹಿಯನ್ನು ಪಡೆದಿರುವುದಿಲ್ಲ. ಈ ನ್ಯಾಯಾಲಯದಲ್ಲಿಯೇ ದಿಃ 09.12.2025 ರಂದು ಮಾಡಿದ ಪಾಟೀ ಸವಾಲಿನಲ್ಲಿ ದಾವಾ ಆಸ್ತಿಯಲ್ಲಿರುವ ಎರಡು ಅಂತಸ್ತಿನ ಮನೆಯನ್ನು ನಮ್ಮ ತಂದೆಯೇ ಕಟ್ಟಿರುತ್ತಾರೆ ಎಂದು ಒಪ್ಪಿ ಕೊಂಡು ಈ ದಿನ ಸದರಿ ಮನೆಯನ್ನು ನಾನು ಕಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ನನಗೆ ಈಗ ಅರೆವು ಮರೆವು ಆಗುತ್ತಿದ್ದರಿಂದ ಹಾಗೇ ಹೇಳಿರಬಹುದು ಎಂದು ಹೇಳುತ್ತಾರೆ.

ನಿಡಿ 13 ಮತ್ತು 14 ರಂತೆ ಇರುವ ರಶೀದಿಗಳ ದಿನಾಂಕಗಳ ಸಮಯದಲ್ಲಿ ನಾನೇ LIC ಯ ಸಾಲವನ್ನು ಮರಳಿ ನಾನೇ ಬ್ಯಾಂಕಿನಿಂದ ತೆಗೆದು ತುಂಬಿರುತ್ತೇನೆ ಎಂದು ಹೇಳಿದಂತೆ ಸದರಿ ಹಣವನ್ನು ಯಾವ ಬ್ಯಾಂಕ ಖಾತೆಯಿಂದ ತೆಗೆದು LIC ಸಾಲವನ್ನು ತುಂಬಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 13 ಮತ್ತು 14 ರಲ್ಲಿರುವ ದಿನಾಂಕಗಳಂದು ನಿಡಿ 12 ರಂತೆ ಇರುವ ಬ್ಯಾಂಕ ಖಾತೆಯಲ್ಲಿ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ನಿಜ. ಸಾಕ್ಷಿಯು ಮುಂದುವರೆದು ಮನೆಯಲ್ಲಿ ವ್ಯಾಪಾರದಿಂದ ಬಂದ ಹಣ ಹಾಗೂ ಬ್ಯಾಂಕಿನಿಂದ ಮೊದಲೇ ಹಣವನ್ನು ತೆಗೆದುಕೊಂಡು ಬಂದು ಇಟ್ಟುಕೊಂಡ ಹಣವನ್ನು ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಎಷ್ಟು ದಿನಗಳ ಮುಂಚೆ ಹಣವನ್ನು ಬ್ಯಾಂಕಿನಿಂದ ತೆಗೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು 3-4 ತಿಂಗಳ ಮುಂಚೆ ತೆಗೆದುಕೊಂಡು ಬಂದಿದ್ದೇನು ಆದರೆ ನಿಖರವಾಗಿ ಹೇಳಲು ನೆನಪಿಲ್ಲ ಎಂದು ಹೇಳುತ್ತಾರೆ. ಹೀಗೆ ಮೊದಲೇ ಹಣವನ್ನು ಬ್ಯಾಂಕಿನಿಂದ ತೆಗೆದುಕೊಂಡು ಬಂದಿರುತ್ತೇನೆ ಎಂದು

ಹೇಳಲಾದ ಹಣವನ್ನು ಸಾಲ ತುಂಬಲು ತೆಗೆದಿರುವುದಿಲ್ಲ ನಿಮ್ಮ ಬೇರೆ ಯಾವುದೇ ವ್ಯವಹಾರಕ್ಕಾಗಿ ತೆಗೆದ ಹಣ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಮನೆಯನ್ನು ಖರೀದಿ ಮಾಡಿರುತ್ತೇನೆ ಎಂದು ಹೇಳಲಾದ ಸಮಯದಲ್ಲಿಯೂ ನನ್ನ ಬ್ಯಾಂಕ ಖಾತೆಯಲ್ಲಿ ರೂ.48,000/- ಗಳ ಖರೀದಿ ರಕಂ ಇರಲಿಲ್ಲ ಎಂದರೆ ಸರಿಯಲ್ಲ.

LIC ಸಾಲದ ನೊಟೀಸಗಳು ನಮ್ಮ ತಂದೆಗೆ ಬಂದಿರುತ್ತದೆ ಎಂದರೆ ನಿಜ. ಸದರಿ ಸಾಲವನ್ನು ಮರುಪಾವತಿ ಮಾಡಿದ ಬಗ್ಗೆ ರಶೀದಿಗಳು ಸಹ ನಮ್ಮ ತಂದೆಯ ಹೆಸರಿನಲ್ಲಿಯೇ ಇರುತ್ತವೆ ಎಂದರೆ ನಿಜ. ಆದ್ದರಿಂದ ಸದರಿ ಸಾಲವನ್ನು ನಮ್ಮ ತಂದೆಯೇ ಮರು ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಮೋಸ ಮಾಡಿ ದಾವಾ ಆಸ್ತಿ ನಂ. 953 ನ್ನು ನನ್ನ ಹೆಸರಿಗೆ ಸುಳ್ಳಾಗಿ ಖರೀದಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನಂ. 823/1/2 ದನ್ನು ನಮ್ಮ ತಂದೆಯವರೇ ಹಣವನ್ನು ಕೊಟ್ಟು ನನ್ನ ಹೆಸರಿಗೆ ಖರೀದಿ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.  ಸಾಕ್ಷಿಯು ಮುಂದುವರೆದು ನಾನೇ ದುಡಿದು ನನ್ನ ಹಣದಿಂದ ಸದರಿ ಆಸ್ತಿಯನ್ನು ಖರೀದಿ ಮಾಡಿಕೊಂಡಿರುತ್ತೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿ ನಂ. 953 ನ್ನು ನಾನು ಖರೀದಿ ಮಾಡಿಕೊಂಡಿರುತ್ತೇನೆ ಎನ್ನಲಾದ ದಿನದಿಂದಲೂ ಸದರಿ ಮನೆಯಲ್ಲಿರುವ ಬಟ್ಟೆ ಅಂಗಡಿ ಬಂದ ಇರುತ್ತದೆ ಎಂದರೆ ಸಾಕ್ಷಿಯು ಸದರಿ ಅಂಗಡಿ ಹಾಳಾದ ಕಾರಣ ಬಂದ ಇರುತ್ತದೆ ಎಂದು ಹೇಳುತ್ತಾರೆ. ಸದರಿ ಅಂಗಡಿ ಸರಿಯಾಗಿಯೇ ಇದ್ದು ಅದರಲ್ಲಿ ನಮ್ಮ ತಂದೆಯು ವ್ಯಾಪಾರ ಮಾಡುತ್ತೇನೆ ಎಂದು ಹೇಳಿದರೂ ಸಹ

ಅವರಿಗೆ ವ್ಯಾಪಾರ ಮಾಡಲು ಬಿಡದೇ ಅವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಹೀಗೆ ನಮ್ಮ ತಂದೆಗೆ ವ್ಯಾಪಾರ ಮಾಡಲು ಬಿಡದೇ ಇರುವುದರಿಂದ ನಮ್ಮ ಅಂಗಡಿಯ ಪಕ್ಕದಲ್ಲಿದ್ದ ಡವಳೆ ರಾಮ ಎಂಬುವವರ ಅಂಗಡಿಯನ್ನು ಬಾಡಿಗೆ ಪಡೆದುಕೊಂಡು ಅಲ್ಲಿ ವ್ಯಾಪಾರ ಮಾಡುತ್ತಿದ್ದರು ಎಂದರೆ ನಿಜ. ಇತ್ತಿತ್ತಲಾಗಿ ನಮ್ಮ ತಂದೆಗೆ ವಯಸ್ಸಾದ ಕಾರಣ ಸದರಿ ಅಂಗಡಿಯಲ್ಲಿ ವ್ಯಾಪಾರ ಮಾಡುವುದನ್ನು ನಿಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು 20 ವರ್ಷಗಳ ಹಿಂದೆಯೇ ವ್ಯಾಪಾರ ಮಾಡುವುದನ್ನು ನಿಲ್ಲಿಸಿರುತ್ತಾರೆ ಎಂದು ಹೇಳುತ್ತಾರೆ. ಇತ್ತಿತ್ತಲಾಗಿ ವ್ಯಾಪಾರ ಮಾಡುವುದನ್ನು ನಿಲ್ಲಿಸಿದ್ದರೂ ನಾನು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು 8-10 ವರ್ಷಗಳ ಹಿಂದೆ ವ್ಯಾಪಾರ ಮಾಡುವುದನ್ನು ನಿಲ್ಲಿಸಿರುತ್ತಾರೆ ಎಂದು ಹೇಳುತ್ತಾರೆ. ನಾನು ಸುಳ್ಳು ಮಾಹಿತಿಗಳನ್ನು ನೀಡಿ ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಈಗ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮದುವೆಯು 1999 ರಲ್ಲಿ ಆಗಿರುತ್ತದೆ. ನಮ್ಮ ಮದುವೆಯನ್ನು ನಮ್ಮ ತಂದೆಯೇ ಮಾಡಿರುತ್ತಾರೆ ಎಂದರೆ ನಿಜ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**